# ಕರ್ನಾಟಕ ಸರ್ಕಾರ

ಸಂಖ್ಯೆ: ಅಪಜೀ 168 ಇಪಿಸಿ 2017

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:11.08.2017.

## ಅಧಿಸೂಚನೆ

1. ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯಾಧಿಕರಣದ ಪ್ರಧಾನ ಪೀಠ, ನವದೆಹಲಿರವರು ಮೂಲ ಅರ್ಜಿ ಸಂಖ್ಯೆ: 471/2016 ರ ಮೇಲೆ ದಿನಾಂಕ: 16.05.2017 ರಂದು ರಾಜ್ಯ ಸರ್ಕಾರಗಳು ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯಿದೆ, 1981ರ ಕಲಂ 19(3)ರಂತೆ "ಪೆಟ್ ಕೋಕ್ ಒಂದು ಅಧಿಕೃತ ಇಂಧನವೇ ಅಥವಾ ಇಲ್ಲವೇ" ಎಂಬ ಬಗ್ಗೆ ತೀರ್ಮಾನಿಸತಕ್ಕದ್ದು ಮತ್ತು ಅವರ ನಿರ್ಧಾರವನ್ನು ಎರಡು ತಿಂಗಳ ಒಳಗಾಗಿ ಪ್ರಕಟಿಸತಕ್ಕದ್ದೆಂದು ಆದೇಶಿಸಿರುವುದಲ್ಲದೆ, ಸದರಿ ಆದೇಶದಲ್ಲಿ ನೀಡಲಾಗಿರುವ ನಿರ್ದೇಶನಗಳನ್ನು ಪಾಲಿಸದ ಹೊರತು ಯಾವುದೇ ಕಾರ್ಖಾನೆ ಅಥವಾ ಕಾರ್ಯವಿಧಾನದಲ್ಲಿ ಬಳಸತಕ್ಕದ್ದಲ್ಲವೆಂದೂ ನಿರ್ದೇಶಿಸಿರುತ್ತಾರೆ.

2. ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯಾಧಿಕರಣದ ಆದೇಶದ ಹಿನ್ನೆಲೆಯಲ್ಲಿ ಪೆಟ್ ಕೋಕ್ ಅನ್ನು ಇಂಧನವಾಗಿ ಬಳಸುವುದಕ್ಕೆ ಸಂಬಂಧಿಸಿದಂತೆ ಸರ್ಕಾರವು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಒಂದು ವರದಿಯನ್ನು ಕೋರಿತ್ತು.

3. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ತನ್ನ ತಾಂತ್ರಿಕ ಸಲಹಾ ಮಂಡಳಿಯಲ್ಲಿ ಪೆಟ್ ಕೋಕ್ ಅನ್ನು ಕಾರ್ಖಾನೆಗಳಲ್ಲಿ ಒಂದು ಇಂಧನವಾಗಿ ಬಳಸುವುದು ಮತ್ತು ವಾಯು ಮಾಲಿನ್ಯದ ಮೇಲೆ ಇದರ ಪರಿಣಾಮ ಕುರಿತು ಪರಿಶೀಲಿಸಿ, ಸಮರ್ಪಕ ವಾಯು ಮಾಲಿನ್ಯ ನಿಯಂತ್ರಣ ಕ್ರಮಗಳನ್ನು ಹೊಂದಿರುವ ಸಿಮೆಂಟ್ ಕಾರ್ಖಾನೆಗಳು ಹಾಗೂ ಸಿಮೆಂಟ್ ಕಾರ್ಖಾನೆಗಳಿಗೆ ಹೊಂದಿಕೊಂಡಂತಿರುವ ವಿದ್ಯುತ್ ಸ್ಥಾವರಗಳನ್ನು ಹೊರತುಪಡಿಸಿದಂತೆ ರಾಜ್ಯದಲ್ಲಿ ಪೆಟ್ ಕೋಕ್ ಅನ್ನು ಇಂಧನವಾಗಿ ಬಳಸುವುದನ್ನು ನಿಷೇಧಿಸಿ ಆದೇಶಿಸುವಂತೆ ಶಿಫಾರಸ್ಸು ಮಾಡಿರುತ್ತದೆ.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯಿದೆ, 1981ರ ಕಲಂ 2 (ಡಿ) ರಂತೆ ಸಿಮೆಂಟ್ ಉತ್ಪಾದನಾ ಘಟಕಗಳು ಹಾಗೂ ಸಿಮೆಂಟ್ ಉತ್ಪಾದನಾ ಘಟಕಗಳಿಗೆ ಹೊಂದಿಕೊಂಡಿರುವ ವಿದ್ಯುತ್ ಸ್ಥಾವರಗಳಲ್ಲಿ ಪೆಟ್ ಕೋಕ್ ಅನ್ನು "ಅಧಿಕೃತ ಇಂಧನ"ವಾಗಿ ಅಧಿಕೃತ ಜ್ಞಾಪನದ ಸಂಖ್ಯೆ:ಪಿಸಿಬಿ/17/17 ಸಿಎಟಿ/ಪೆಟ್ ಕೋಕ್/2017-18/2332 ದಿನಾಂಕ:22.07.2017 ರಲ್ಲಿ ಘೋಷಿಸಿರುತ್ತದೆ.

5. ಪೆಟ್ ಕೋಕ್ ಹೆಚ್ಚಿನ ಗಂಧಕ ಅಂಶವನ್ನು ಹೊಂದಿರುವುದರಿಂದ ಇದನ್ನು ಸಮರ್ಪಕ ಹಾಗೂ ಸಾಕಷ್ಟು ವಾಯು ಮಾಲಿನ್ಯ ನಿಯಂತ್ರಣ ಕ್ರಮಗಳಿಲ್ಲದಿದ್ದಾಗ ಇಂಧನವಾಗಿ ಬಳಸಿದಾಗ ಗಂಧಕದ ಡೈಆಕ್ಸೈಡ್ ಹೊರಸೂಸುವಿಕೆಯ ಪ್ರಮಾಣ ಹೆಚ್ಚಾಗಿ ವಾಯು ಗುಣಮಟ್ಟ ಕ್ಷೀಣಿಸುವುದರಿಂದ ಆರೋಗ್ಯ ಸಮಸ್ಯೆಗಳನ್ನು ಸೃಷ್ಟಿಸುತ್ತವೆಂಬುದನ್ನು ಸರ್ಕಾರವು ಗಮನಿಸಿರುತ್ತದೆ.

ಆದುದರಿಂದ, ರಾಜ್ಯ ಸರ್ಕಾರವು ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯಿದೆ, 1981ರ ಕಲಂ 19(3)ರ ಅನುಸಾರ ರಾಜ್ಯಾದ್ಯಂತ ವಾಯುಮಾಲಿನ್ಯ ನಿಯಂತ್ರಣಕ್ಕೊಳಪಟ್ಟಿರುವ ಪ್ರದೇಶದಲ್ಲಿನ ಈ ಕೆಳಕಂಡವುಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಕೈಗಾರಿಕೆಗಳಲ್ಲಿ ಪೆಟ್ ಕೋಕ್ ಅನ್ನು ಇಂಧನವಾಗಿ ಬಳಸುವುದನ್ನು ಈ ಮೂಲಕ ನಿಷೇಧಿಸುತ್ತದೆ.

1) ಸಿಮೆಂಟ್ ಆವಿಗೆ (kiln)
2) ಸಿಮೆಂಟ್ ಉತ್ಪಾದನಾ ಘಟಕಗಳಿಗೆ ಹೊಂದಿಕೊಂಡಿರುವ ಸುಣ್ಣದಕಲ್ಲನ್ನು ಬಳಸಿ ಗಂಧಕದ ಡೈಆಕ್ಸೈಡ್ ($SO_2$) ಹೊರಸೂಸುವಿಕೆಯನ್ನು ನಿಯಂತ್ರಿಸಬಲ್ಲ ಸರ್ಕ್ಯುಲೇಟಿಂಗ್ ಫ್ಲೂಯಿಡೈಸ್ಡ್ ಬೆಡ್ ಕಂಬಷ್ಚನ್ (CFBC) ಬಾಯ್ಲರ್ ಹೊಂದಿರುವ ವಿದ್ಯುತ್ ಸ್ಥಾವರಗಳನ್ನು ಹೊರತುಪಡಿಸಿ,

...2

ಈ ಆದೇಶವು ಈ ಅಧಿಸೂಚನೆ ಸರ್ಕಾರದ ರಾಜ್ಯಪತ್ರದಲ್ಲಿ ಪ್ರಕಟಗೊಂಡು ಮೂರು ತಿಂಗಳು ಮುಕ್ತಾಯಗೊಂಡ ದಿನಾಂಕದಿಂದ ಜಾರಿಗೆ ಬರುತ್ತದೆ. ಈ ಮಧ್ಯೆ ಪೆಟ್ ಕೋಕ್ ಅನ್ನು ಇಂಧನವಾಗಿ ಬಳಸುತ್ತಿರುವ ಯಾವುದಾದರೂ ಕಾರ್ಖಾನೆ ಇದ್ದಲ್ಲಿ, ಅಂತಹವರು ಈ ಅಧಿಸೂಚನೆ ಸರ್ಕಾರದ ರಾಜ್ಯಪತ್ರದಲ್ಲಿ ಪ್ರಕಟಣೆಗೊಂಡ ದಿನಾಂಕದಿಂದ ಮೂರು ತಿಂಗಳ ಒಳಗಾಗಿ ನಿಯಮಾನುಸಾರ ಸಕ್ಷಮ ಪ್ರಾಧಿಕಾರದ ಸಮ್ಮತಿ ಪಡೆದು, ಬೇರೆ "ಅಧಿಕೃತ ಇಂಧನ" (approved fuel)ಕ್ಕೆ ಬದಲಾಯಿಸಿಕೊಳ್ಳತಕ್ಕದ್ದು.

ಈ ಅಧಿಸೂಚನೆಯ ಉಲ್ಲಂಘನೆಯನ್ನು ಸಂಬಂಧಪಟ್ಟ ಪ್ರಾಧಿಕಾರಗಳು ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯಿದೆ, 1981ರ ಅನುಸಾರ ನಿರ್ವಹಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಹೆಚ್. ಸಿ. ರಾಜೇಂದ್ರ ಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ
(ಜೀವಿಪರಿಸ್ಥಿತಿ ಮತ್ತು ಪರಿಸರ) (ಪ್ರ),
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ.

**ಗೆ :**

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ – ವಿಶೇಷ ಸಂಚಿಕೆಯಲ್ಲಿ ಪ್ರಕಟಿಸಿ, 100 ಪ್ರತಿಗಳನ್ನು ಸರ್ಕಾರದ ಕಾರ್ಯದರ್ಶಿ (ಜೀವಿಪರಿಸ್ಥಿತಿ ಮತ್ತು ಪರಿಸರ), ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರಿಗೆ ಕಳುಹಿಸಲು ಕೋರಿದೆ.

**ಪ್ರತಿಗಳು:**

1. ಕಾರ್ಯದರ್ಶಿಗಳು, ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ಭಾರತ ಸರ್ಕಾರ, ಇಂದಿರಾ ಪರ್ಯಾವರಣ ಭವನ, ಜೋರ್ ಭಾಗ್ ರೋಡ್, ಅಲಿಗಂಜ್, ನವದೆಹಲಿ– 110003.
2. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು.
3. ಅಧ್ಯಕ್ಷರು/ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ನಂ. 49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು – 560 001.
4. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

# GOVERNMENT OF KARNATAKA

No. FEE 168 EPC 2017

Karnataka Government Secretariat,
M.S. Building,
Bangalore, Dated:11.08.2017.

## NOTIFICATION

1. Whereas, the Principal Bench of the Hon'ble National Green Tribunal, New Delhi vide order dated 16.05.2017 in O.A. No. 471 of 2016 have directed that the State Governments shall take a decision as to whether the Pet Coke is "an approved fuel or not" in terms of Section 19 (3) of the Air (Prevention and Control of Pollution) Act, 1981 and notify their decision within a period two months apart from directing that no industry or process shall use Pet Coke as fuel without adhering to the conditions prescribed in the said Order.

2. Whereas, the Government sought a report from the Karnataka State Pollution Control Board with regard to use of Pet Coke as a fuel in the light of the orders of the Hon'ble National Green Tribunal.

3. Whereas, the Karnataka State Pollution Control Board have examined the issue with regard to use of Pet Coke as a fuel in the industries and its implications on air pollution in the Technical Advisory Committee and have recommended for imposing ban on use of Pet Coke as a fuel in the State except in cement industries and captive power plants attached to the cement industries with proper air pollution control measures.

4. Whereas, the Karnataka State Pollution Control Board have declared Pet Coke as an "Approved Fuel" for use in cement units including captive power plants of cement units, as per section 2(d) of the Air (Prevention and Control of Pollution) Act, 1981 vide Office Memorandum No. PCB/17 Cat/Pet Coke/2017-18/2332 dated 22nd July 2017.

5. Whereas, it is observed in the Government that the Pet Coke has higher Sulphur content and hence it is likely that the Sulphur Dioxide emissions are higher when Pet Coke is used as fuel without sufficient and appropriate air pollution control measures and hence result in deterioration of the air quality which would cause health hazard.

Wherefore, the State Government hereby prohibit use of Pet Coke as fuel in all the industries located in air pollution control areas of the entire State in accordance with section 19 (3) of the Air (Prevention and Control of Pollution) Act, 1981, except in the following:

1) The cement kilns
2) Captive power plants within cement units having facility of Circulating Fluidized Bed Combustion (CFBC) boilers, wherein $SO_2$ emissions are controlled by use of limestone.

..2

This prohibition comes into effect from the date of completion of three months from the date of publication of this Notification in the Government Gazette. In the meantime those who are using pet coke as a fuel, if any shall change over to any other "approved fuel" within three months from the date of publication of this Notification in the Government Gazette with the consent of the competent authority in accordance with law.

Non-compliance of this Notification shall be dealt with by the competent authorities in accordance with the provisions of the Air (Prevention and Control of Pollution) Act, 1981.

By Order & in the name of the
Governor of Karnataka,

**(H.C. Rajendra Kumar)**
Under Secretary to Government
(Ecology and Environment) (I/c),
Forest, Ecology and Environment Department

**To:**

The Compiler, Karnataka State Gazette - with a request to publish in the special issue and arrange to furnish 100 copies to the Secretary to Government (Ecology and Environment), Forest, Ecology and Environment Department, M.S. Building, Bangalore.

Copy to,

1. The Secretary, Ministry of Environment, Forest and Climate Change, Government of India, Indira Paryavaran Bhavan, Jor Bagh Road, Aliganj, New Delhi- 110003.
2. All the Additional Chief Secretaries/Principal Secretaries/Secretaries to Government.
3. The Chairman/Member Secretary, Karnataka State Pollution Control Board, No.49, "Parisara Bhavana", Church Street, Bengaluru.
4. Guard File/ spare copies.